ಮೊದಲ ಹೆಂಡತಿಯ ಮೊದಲ ಮಗಳು ಕಲ್ಪನಾ ವಿಝ್‌ಗೆ ಆ ಮನೆಯಲ್ಲಿ ಪ್ರವೇಶ ಬಂದಾಗಿ ದಶಕಗಳೇ ಕಳೆದಿವೆ. ಕಲ್ಪನಾ 'ಲಿವ್ ನ್ಯಾಚುರಲೀ' ಅಂತನ್ನೋ 'ಆರೋಗ್ಯಕರ ಆಹಾರ'ಗಳ ಕಂಪನಿ ತೆರೆದದ್ದೂ ಅದರ ಪ್ರೋಟಿನ್ ಪೌಡರುಗಳು, ಓಟ್ಮೀಲಿನ ಕಾರ್ನ್‌ಫ್ಲೇಕುಗಳು, ಅರಾರೂಟಿನ ಪುಡಿಗಳು ನೋಡನೋಡ ಪ್ರಸಿದ್ಧವಾಗಿದ್ದೂ ಹಳೆಯ ಸುದ್ದಿ. ಆದರೆ, ಏಕ್‌ದಮ್ಮಾಗಿ ಯಾವುದೇ ಮುನ್ಸೂಚನೆ ಇಲ್ಲದೆ ಆ ಕಂಪನಿಯ ಎಲ್ಲ ವಸ್ತುಗಳು ಬಂದ್ ಆಗಿದ್ದು ಮಾತ್ರ ಈವತ್ತಿಗೂ ಒಂಥರಾ ರಹಸ್ಯಾನೇ.

ಮುಂದೆ ಅವಳು ಕಾರ್ಟ್ ಟಿ ಸೆಲ್ ಥೆರಪಿ ಮತ್ತು ಸೆಲ್ಯುಲಾರ್ ಪ್ರೋಗ್ರಾಮ್‌ಗಳ ಅಭ್ಯಾಸಕ್ಕಾಗಿಯೇ ಶಿಲಾಂಗ್‌ನ ಚಿಕ್ಕಹಳ್ಳಿಯಲ್ಲಿ ವಿಶೇಷ ಪ್ರಯೋಗಾಲಯ ಮತ್ತದರ ತಯಾರಿಕಾ ಘಟಕ ತೆರೆದಿದ್ದಳಂತೆ. ಯಾವ್ಯಾವುದೋ ಹೊಸ ಔಷಧಿಗಳ ಪೇಟೆಂಟ್ ಸಿಕ್ಕು ಆ ಘಟಕ ಕೂಡ ಅಂತರರಾಷ್ಟ್ರೀಯ ಮನೆ ಮಾತಾಗಿತ್ತಂತೆ. ಆದರೆ, ಔಷಧಿಗಳಲ್ಲಿ ಏನೋ ರಾಂಗ್ ಆಗಿ, ಅವಳಪ್ಪನೂ ಅವಳಿಗೆ ರಾಂಗ್ ಆಗಿ ಅವರಿಬ್ಬರ ಸಂಬಂಧ ಕೆಟ್ಟು ಹೋಗಿ ಅವಳ ಹೆಸರು ಸುಖೀರಾಮರ ಬಿಸಿನೆಸ್ ಜಗತ್ತಿನ ವಿಲನ್ ಪಟ್ಟಿಯಲ್ಲಿ ಸೇರಿಹೋಯ್ತಂತೆ. ಅವಳೀಗ ಎಲ್ಲಿದ್ದಾಳೋ, ಹೇಗಿದ್ದಾಳೋ ಯಾವುದೂ ಗೊತ್ತಿಲ್ಲವಂತೆ... ಅಂತೆಕಂತೆಗಳ ಕಥೆ ಸೈನಸ್ ಅಲೆಯಂತೆ ಮೇಲೇರಿ ಇಳಿದಿತ್ತು. ಅದೇನೇ ಇರಲಿ ಇಂದಿಗೂ ಅವಳ ಹೆಸರೆತ್ತಿದರೇನೇ ಸುಖೀರಾಮನ ಹಣೆಯಲ್ಲಿ ಹಸಿರು ನರಗಳ ನರ್ತನ ಶುರುವಾಗೋದಂತೂ ನಿಜ.

'ಸರ್ ಮೂಲಭೂತವಾಗಿ ಈ ಸೆಲ್ಯುಲಾರ್ ಪ್ರೋಗ್ರಾಮ್ ಅಂದರೆ ಮನುಷ್ಯನ ವಿಭಜಿತವಾಗಿರೋ ಜೀವಕೋಶಗಳನ್ನು ಮತ್ತೆ ಭ್ರೂಣಾವಸ್ಥೆಗೆ ತಳ್ಳೋದಷ್ಟೇ ತಾನೇ? ಆದರೆ, ಇದರಿಂದ ಮನುಷ್ಯನ ಆಯುಷ್ಯ ಎಷ್ಟು ಹೆಚ್ಚಾದೀತು ಸರ್? ಭ್ರೂಣ ಮತ್ತೆ ಜೀವಕೋಶ ಆಗುತ್ತೆ, ಜೀವಕೋಶ ಮತ್ತೆ ವಿಭಜನೆಯಾಗುತ್ತೆ'.

'ಬರೀ ಆಯುಷ್ಯ ಹೆಚ್ಚು ಮಾಡೋ ಪ್ರಶ್ನೆಯಲ್ಲ ಶಿವಾನಿ. ಭ್ರೂಣಾವಸ್ಥೆಗೆ ಒಬ್ಬ ಮನುಷ್ಯನ ಜೀವ ಕೋಶಗಳೆಲ್ಲ ಹೋದುವೆಂದರೆ ಅವನಲ್ಲಿ ಹೊಸ ಉತ್ಸಾಹ ಬರುತ್ತೆ, ಜೀವನದಲ್ಲಿ ಚೈತನ್ಯ ತುಂಬುತ್ತೆ'.

'ಬೋರ್ ಆಗಿದೆ, ಹುರುಪೇ ಇಲ್ಲ ಯಾಕೋ ಇವತ್ತು' ಅಂದ್ರೆ ನಮ್ಮಜ್ಜಿ ಏನು ಹೇಳೋಳು ಗೊತ್ತಾ ಸರ್?, ಏಳು ಹಿತ್ತಲಿಗೆ ಹೋಗಿ ಬಗ್ಗಿ ಹುಲ್ಲು ಕಿತ್ತು. ತೋಟಾನೂ ಸ್ವಚ್ಛವಾಗ್ತದೆ, ಹುರುಪೂ ಓಡಿ ಬರ್ತದೆ. ಅಷ್ಟರಾಗ ನಾ ಚಹಾ ಮಾಡಿ ಕೊಡತೇನಿ ಅಂತ.' ಜನಾರ್ದನರ ಹಿಂದೆ ಮುಂದೆ ಓಡಾಡ್ತಾ ಅವರ ಕೈಗೆ ಐ ಪ್ಯಾಡ್ ಕೊಡುವುದು ಫೋನ್ ಇಸಕೊಳ್ಳುವುದು ಮಾಡ್ತಾನೇ ಮಾತಾಡುತ್ತಿದ್ದ ಶಿವಾನಿಗೆ ಏದುಸಿರು ಬಂದು ಅರೆಗಳಿಗೆ ಸುಮ್ಮನಾಗಿ ಮತ್ತೆ ನಿಧಾನವಾಗೆಂದಳು.

'ಸರ್ ಮಜಾ ಗೊತ್ತಾ? ಅಜ್ಜಿ ಹೇಳಿದ ಆ ಟ್ರಿಕ್ ವರ್ಕ್ ಆಗ್ತಿತ್ತು ಸರ್. ಎದ್ದು ನಾಲ್ಕು ಗಜ ಹುಲ್ಲು ತೆಗೆಯೋವಷ್ಟರಲ್ಲಿ ಮೈಯಲ್ಲಿ ಹುರುಪು ತುಂಬೋದು.'

'ಅದು ನಿಮ್ಮಜ್ಜಿ ಮಾಡಿಕೊಟ್ಟ ಚಹಾದಿಂದ ಬಂದ ಹುರುಪು'

'ಸೋ ವಾಟ್ ಸರ್? ಒಂದು ಕಪ್ ಚಹಾ ಮಾಡಿ ಕೊಡುವ ಅಜ್ಜಿ - ಇಷ್ಟಿದ್ದರೆ ಸಾಕಲ್ಲವೇ ಹುರುಪಿಗೆ. ಮತ್ತೆ ಇದೆಲ್ಲ ಯಾಕೆ?'

'ಡೋಂಟ್ ಟಾಕ್ ಲೈಕ್ ಎನ್ ಈಡಿಯಟ್' ಜನಾರ್ದನರ ಧ್ವನಿ ಅವರೆಣಿಸಿದ್ದಕ್ಕಿಂತ ಖಾರವಾಗಿತ್ತು.

ಉದ್ದೋಉದ್ದದ ಪ್ಯಾಸೇಜು ಮುಗಿದು ಸುಖೀರಾಮರ ಜಿಮ್ ಬಂದದ್ದರಿಂದ ಮಾತು ಅಲ್ಲಿಗೇ ನಿಂತಿತು. 'ಸರ್ ನಿಮ್ಮ ಮನೆಯಲ್ಲಿ ಹಿತ್ತಲ ಬಾಗಿಲಿಗಿರೋದು ಗೇಟ್ ಎನಾಲಿಸಿಸ್ ಬಯೋಮೆಟ್ರಿಕ್, ಮುಂಬಾಗಿಲಿಗೆ ಮಾತ್ರ ನನಗೆನಿಸೋಮಟ್ಟಿಗೆ...' ಜನಾರ್ದನರ ಮಾತು ಮುಗಿಯುವ ಮುನ್ನವೇ ಸುಖೀರಾಮ್ ಉತ್ತರಿಸಿದ್ದರು 'ಮುಂಬಾಗಿಲಿಗೆ ಫೇಶಿಯಲ್ ಬಯೋಮೆಟ್ರಿಕ್ ಜೊತೆ 'ಇ ಆರ್' ಕೂಡಾ ಇದೆ'.

'ಸರ್ 'ಎಮೋಶನಲ್ ರಿಕಗ್ನಿಶನ್' ಯಾಕೆ?'

'ಯಾಕಂದರೇನರ್ಥ? ಮನೆಗೆ ಬಂದಿರೋ